ಓ.ಎಸ್. ನಂ. 60/2018 ಡಿ.ಡಬ್ಲ್ಯೂ- 2

**ಸಾಕ್ಷಿಯನ್ನು ದಿನಾಂಕ 23.1.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್.ಕೆ ವಕೀಲರಿಂದಃ**

ವಾದಿಯು ನಮ್ಮ ಊರಿನವರಾಗಿರುತ್ತಾರೆ. ಅವರ ಹೆಂಡತಿ ಮಕ್ಕಳು ನಮ್ಮ ಊರಿನಲ್ಲಿ ವಾಸವಾಗಿರುತ್ತಾರೆ. ನನಗೆ ಪ್ರತಿವಾದಿಯರು ಸಹ ಪರಿಚಯವಿರುತ್ತಾರೆ ಮತ್ತು ಅವರ ನಮ್ಮ ಪಕ್ಕದ ಊರಿನವರಾಗಿರುತ್ತಾರೆ. ವಾದಿ ಪ್ರತಿವಾದಿಯರ ನಡುವೆ ಜಮೀನಿನ ವಿಚಾರವಾಗಿ ವ್ಯಾಜ್ಯ ನಡೆಯುತ್ತಿದೆ. ನನಗೆ ತಹಶೀಲ್ದಾರ್ ನ್ಯಾಯಾಲಯದಿಂದ ಸಮನ್ಸ ಬಂದಾಗ ವಾದಿ ಪ್ರತಿವಾದಿಯರ ನಡುವೆ ಇರುವ ವ್ಯಾಜ್ಯದ ಬಗ್ಗೆ ಗೊತ್ತಾಗಿರುತ್ತದೆ. ನನ್ನ ಹೆಸರಿಗೆ ಖಾತೆಯಾಗುವುದನ್ನು ತಡೆಯಲು ವಾದಿಯು ತಕರಾರು ಸಲ್ಲಿಸಿದ್ದರಿಂದ ತಹಶೀಲ್ದಾರ್ ನ್ಯಾಯಾಲಯದಿಂದ 2021 ರಲ್ಲಿ ಸಮನ್ಸ ಬಂದಿರುತ್ತದೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಯಾವುದೇ ಕಂದಾಯ ದಾಖಲೆಯನ್ನು ನೋಡಿದರೆ ಗೊತ್ತಾಗುವುದಿಲ್ಲ. ದಾವಆಸ್ತಿಯು ಮೂಲತಃ ಹೇಗೆ ಬಂದಿರುತ್ತದೆ ಎಂದು ತಿಳಿದುಕೊಂಡಿರುತ್ತೇನೆ. ನಾನು ದಾವಆಸ್ತಿಯ ಮೂಲ ದಾಖಲೆಯನ್ನು ನೋಡಿರುತ್ತೇನೆ. ನಾನು ಸಣ್ಣಪ್ಪ ರವರಿಂದ ವೆಂಕಟೇಗೌಡರಿಗೆ ಆಗಿರುವ ಕ್ರಯಪತ್ರವನ್ನು ನೋಡಿರುತ್ತೇನೆ. ಸದರಿ ಕ್ರಯಪತ್ರವು 1967 ರ ವರ್ಷದ್ದಾಗಿರುತ್ತದೆ. ಅದನ್ನು ಹೊರತುಪಡಿಸಿ ವೆಂಕಟೇಗೌಡರಿಂದ 1 ನೇ ಪ್ರತಿವಾದಿಗೆ ವಿಭಾಗಪತ್ರವಾಗಿರುವುದನ್ನು ನೋಡಿರುತ್ತೇನೆ. ಸದರಿ ದಾಖಲೆಗಳನ್ನು ನಾನು ನನ್ನ ಹೆಸರಿಗೆ ಕ್ರಯಪತ್ರ ಮಾಡಿಸಿಕೊಳ್ಳುವಾಗ ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಗಳು ನನ್ನ ಬಳಿ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಆ ರೀತಿ ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ ಮತ್ತು ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿ ಮೂಲತಃ ಹೇಗೆ ಬಂದಿರುತ್ತದೆ ಮತ್ತು ಸದರಿ ಆಸ್ತಿಯಲ್ಲಿ ಯಾರಿಗೆ ಹಕ್ಕು ಇರುತ್ತದೆ ಎಂದು ತಿಳಿದುಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಮೂಲತಃ ಸಣ್ಣಪ್ಪ ರವರಿಂದ ವೆಂಕಟೇಗೌಡರಿಗೆ ಬಂದಿರುತ್ತದೆ ಎನ್ನುವರು. ದಾವಆಸ್ತಿಯು ಮೂಲತಃ ಸಣ್ಣಪ್ಪ ರವರಿಗೆ ಸರ್ಕಾರದಿಂದ ಮಂಜೂರಾಗಿರುತ್ತದೆ. ಸದರಿ ಸಾಗುವಳಿ ಪತ್ರವನ್ನು ವೆಂಕಟೇಗೌಡ ಅಥವಾ 1 ನೇ ಪ್ರತಿವಾದಿಯಿಂದ ಪಡೆದುಕೊಂಡಿರುವುದಿಲ್ಲ. ಸಾಮಾನ್ಯವಾಗಿ ದರಕಾಸ್ತು ಮೂಲಕ ಬಂದಿರುವ ಆಸ್ತಿಯನ್ನು 15 ವರ್ಷಗಳವರೆಗೆ ಪರಭಾರೆ ಮಾಡಬಾರದೆಂದು ನಿಬಂಧನೆ ಇರುತ್ತದೆ ಎಂದರೆ ಸರಿ. ಆ ರೀತಿ ನಿಬಂಧನೆ ಇದುದ್ದರಿಂದ ಸಣ್ಣಪ್ಪ ರವರಿಗೆ ಆಸ್ತಿಯನ್ನು ಮಾರಾಟ ಮಾಡುವ ಪ್ರಮೇಯ ಇರುವುದಿಲ್ಲ ಮತ್ತು ಅವರು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ 1967 ರ ಯಾವುದೇ ಕ್ರಯಪತ್ರ ಇರುವುದಿಲ್ಲ ಎಂದರೆ ಸರಿಯಲ್ಲ. ಸಣ್ಣಪ್ಪ ರವರು ವೆಂಕಟೇಗೌಡರಿಗೆ ಯಾವುದೇ ಕ್ರಯಪತ್ರ

ಬರೆದುಕೊಟ್ಟಿರುವುದಿಲ್ಲ, ವೆಂಕಟೇಗೌಡರು ಯಾರದೋ ಸಹಿಯನ್ನು ಪಡೆದುಕೊಂಡು ಸದರಿ ಕ್ರಯಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. 2018 ರವರೆಗೆ ವಾದಿ ಮತ್ತು ಅವರ ಕುಟುಂಬಸ್ಥರು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ.

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರಕ್ಕೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಾಸ್ತವಾಂಶದ ವಿಚಾರದ ಬಗ್ಗೆ 2018 ರಲ್ಲೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಆಸ್ತಿಗೆ ಸಂಬಂಧಪಟ್ಟ ದಾಖಲೆಯನ್ನು ನೋಡಿ ವಾಸ್ತವಾಂಶವನ್ನು ಲಿಖಿತ ಹೇಳಿಕೆ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆಸಿರುತ್ತೇನೆ. ವಾದಿಯು ದಾವಆಸ್ತಿಗೆ ಅವರೇ ಮಾಲೀಕರು ಎಂದು ದಾವೆ ಹಾಕಿರುವ ವಿಚಾರ ನನಗೆ ಗೊತ್ತಿರುತ್ತದೆ. 1 ನೇ ಪ್ರತಿವಾದಿಯು ಈ ದಾವೆಯಲ್ಲಿ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯನ್ನು ಮಾರಾಟ ಮಾಡಬಾರದೆಂದು ದಿನಾಂಕ 20.2.2021 ರಂದು ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ಈ ನ್ಯಾಯಾಲಯ ವಿಧಿಸಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಈ ದಾವೆ ಚಾಲ್ತಿಯಲ್ಲಿದ್ದಾಗ 2 ನೇ ಪ್ರತಿವಾದಿಯು 3 ನೇ ಪ್ರತಿವಾದಿಗೆ ದಾವಆಸ್ತಿಗೆ ಸಂಬಂಧಿಸಿದಂತೆ ದಾನಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿಯು ತನ್ನ ಗಂಡನಿಗೆ ಅನಾರೋಗ್ಯವಿದ್ದರಿಂದ ನನಗೆ ಮಾರಾಟ ಮಾಡಿರುತ್ತಾರೆ. 1 ರಿಂದ 3 ನೇ ಪ್ರತಿವಾದಿಯರಿಗೆ ಬೇರೆ ಆಸ್ತಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. 3 ನೇ ಪ್ರತಿವಾದಿಯ ಗಂಡನಿಗೆ ಚಿಕಿತ್ಸೆ ಕೊಡಿಸಬೇಕೆಂಬ ಉದ್ದೇಶವಿದ್ದರೆ ಅವರು ಬೇರೆ ಆಸ್ತಿಯನ್ನು ಮಾರಾಟ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಆಸ್ತಿಯಲ್ಲಿ ಬೇರೆಯವರಿಗೆ ಹಕ್ಕು ಇರುತ್ತದಾ ಕಾನೂನು ಅಭಿಪ್ರಾಯ ಪಡೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿದಾರರು ಕಾನೂನು ಅಭಿಪ್ರಾಯ ಪಡೆದಿರುತ್ತೇನೆ ಎನ್ನುವರು. ಆ ರೀತಿ ಕಾನೂನು ಅಭಿಪ್ರಾಯವನ್ನು ಲಿಖಿತವಾಗಿ ಪಡೆದಿರುವುದಿಲ್ಲ. 3 ನೇ ಪ್ರತಿವಾದಿಯು ಈ ದಾವೆ ಚಾಲ್ತಿಯಿರುವ ಬಗ್ಗೆ ನನಗೆ ಮಾಹಿತಿಯನ್ನು ನೀಡಿರುವುದಿಲ್ಲ. ಆಸ್ತಿಯನ್ನು ಮಾರಾಟ ಮಾಡಬಾರದೆಂದು ಆದೇಶವಿದ್ದರೂ ಸಹ 3 ನೇ ಪ್ರತಿವಾದಿ ಮತ್ತು ನಾನು ಸೇರಿಕೊಂಡು ದಾವಆಸ್ತಿಯನ್ನು ಖರೀದಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ನೀಡಲು ಪ್ರತಿವಾದಿಯರೆಲ್ಲರೂ ಸೇರಿಕೊಂಡು ದಾವೆ ಚಾಲ್ತಿಯಲ್ಲಿದ್ದಾಗ ದಾವಆಸ್ತಿಯ ಹಕ್ಕನ್ನು ಬದಲಾವಣೆ ಮಾಡಿಕೊಂಡು ಹೋಗುತ್ತಿರುತ್ತೇವೆ ಎಂದರೆ ಸರಿಯಲ್ಲ. ಈ ದಾವೆ ಚಾಲ್ತಿಯಲ್ಲಿದ್ದಾಗ ಆಗಿರುವ ದಾನಪತ್ರ ಮತ್ತು ನನಗೆ ಮಾಡಿಕೊಟ್ಟಿರುವ ಕ್ರಯಪತ್ರಕ್ಕೆ ಯಾವುದೇ ಮಾನ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳು ವಾದಿಯರ ದಾವಆಸ್ತಿಯ ಹಕ್ಕಿಗೆ ಬದ್ದಪಡಿಸುವುದಿಲ್ಲ ಎಂದರೆ ಸರಿಯಲ್ಲ. ದಾವಆಸ್ತಿಯ ಮೂಲ ತಿಳಿದುಕೊಂಡಿದ್ದು ಆಸ್ತಿಯನ್ನು ಖರೀದಿಸಬಾರದೆಂದು ಗೊತ್ತಿದ್ದರೂ ಸಹ ವಾದಿಯರಿಗೆ ತೊಂದರೆ ನೀಡಲು ಆಸ್ತಿಯನ್ನು ಖರೀದಿ

ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದ್ಭಾವನೆಯಿಂದ ಆಸ್ತಿಯನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.